
ಕಲ್ಪನೆಗಿರುವ ಅದ್ಭುತ ಶಕ್ತಿಯನ್ನು ಬದುಕಿನ ಅನುಭವದ ಜೊತೆಯಲ್ಲಿ ಕರಗಿಸಿ ಅಂತರಂಗದ ಸಂಕಟವನ್ನು ಕತೆಯಾಗಿಸಿದ ಕಾಫ್ಕನ ಪ್ರಭಾವಕ್ಕೊಳಗಾಗದವರೇ ಇಲ್ಲವೇನೋ. ಪರಂಪರೆ, ಪ್ರಭಾವ, ಲೇಖಕನ ಪ್ರತಿಭೆ, ಸಂವೇದನೆ ಮತ್ತು ಅನುಭವಗಳು ಒಟ್ಟಾಗಿ ಸೇರಿದಾಗ ಹುಟ್ಟಬಹುದಾದ ಸೃಜನಶೀಲತೆಯ ಸಾಧ್ಯತೆಯಾಗಿ ಕಾಫ್ಕನ ಹಿನ್ನೆಲೆಯಲ್ಲಿ ಹಾನ್ ಕಾಂಗ್ ಕಾಣುತ್ತಾರೆ ಹಾಗೂ ಕಾಫ್ಕನ 'ಮೆಟಮಾರ್ಫಸಿಸ್' ರೂಪಕವನ್ನು ಇನ್ನೊಂದು ನೆಲೆಯಲ್ಲಿ ಹಾನ್ ಕಾಂಗ್ ಮುಂದುವರೆಸುವ ಮೂಲಕ ಕಲ್ಪನೆಯ ಸಾಧ್ಯತೆಯನ್ನು ಅರ್ಥಪೂರ್ಣವಾಗಿ ವಿಸ್ತರಿಸುತ್ತಾರೆ.




ಹಿಂಸೆಯ ಸಾಧ್ಯತೆ ಅಥವಾ ಅಸಾಧ್ಯತೆಗಳನ್ನು ನಿರಾಕರಿಸುವುದನ್ನೇ ಪ್ರಶ್ನಿಸುವುದು; ಮನುಷ್ಯನ ಮನಸ್ಸಿನ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳುವ ಕಷ್ಟ; ಹುಚ್ಚುತನ ಮತ್ತು ಸ್ಥಿತಪ್ರಜ್ಞತೆಯೆಂಬ ಪರಿಕಲ್ಪನೆಗಳ ವ್ಯಾಖ್ಯಾನ ಇತ್ಯಾದಿ ಸಂಗತಿಗಳನ್ನು ವಿಶ್ಲೇಷಿಸುವ 'ದ ವೆಜಿಟೇರಿಯನ್' ಕಾದಂಬರಿಯು, ಹೆಣ್ಣಿನ ದೇಹ ರಾಜಕಾರಣದ ಪ್ರಶ್ನೆಯನ್ನೂ ಸೂಕ್ಷ್ಮವಾಗಿ ಅವಲೋಕಿಸುತ್ತದೆ. ಯಾಂಗ್ ಹೇಯ ಮೌನ ಅಳಲು ಸ್ತ್ರೀ ಸಮುದಾಯದ ಅಳಲೂ, ಮಾನವತೆಯ ಅಳಲೂ ಆಗಿ ಕಾಣತೊಡಗುತ್ತದೆ. ಬಲವಂತವಾಗಿ ಮಗಳಿಗೆ ಮಾಂಸ ತಿನ್ನಿಸಲು ಯತ್ನಿಸುವ ಯಾಂಗ್‌ಳ ತಂದೆ ಮತ್ತು ಯಾಂಗ್ ಆಸ್ಪತ್ರೆಯಲ್ಲಿದ್ದಾಗ ವೈದ್ಯರು ಬಲವಂತವಾಗಿ ತಿನ್ನಿಸುವ ಪ್ರಯತ್ನಗಳು ನಾಗರಿಕತೆಯ ದುರಂತವಾಗಿ ತೋರುತ್ತವೆ. ಅತ್ಯಂತ ಕಡಿಮೆ ಮಾತನ್ನಾಡುವ ಯಾಂಗ್ ಕ್ರಮೇಣ ಮಾತನ್ನು ಸಂಪೂರ್ಣವಾಗಿ ನಿಲ್ಲಿಸಿದಾಗ ಅವಳಿಗೆ ತನ್ನದೇ ದನಿ ಎಲ್ಲಿದೆ? ಯಾವಾಗ ಇತ್ತು? ಎಂಬ ಪ್ರಶ್ನೆ ನಮಗೆ ಎದುರಾದರೂ, ತನ್ನ ಮೌನ ಮತ್ತು ಅಚಲ ನಿಲುವಿನಿಂದಲೇ ಕಾದಂಬರಿಯ ಇತರ ಪಾತ್ರಗಳು ಹಾಗೂ ಓದುಗರ ಅಂತರಂಗದ ಮಾತುಗಳಿಗೆ ಯಾಂಗ್ ಹೇ ದನಿಯಾಗುವ ಭಿನ್ನ ಕಥನಕ್ರಮ ಕಾದಂಬರಿಯಲ್ಲಿದೆ.

ಈ ಕೃತಿಯನ್ನು ಸಸ್ಯಾಹಾರ ಅಥವಾ ಮಾಂಸಾಹಾರ ಪರವಾದ ವಾದವಾಗಿ ಮಾತ್ರ ನೋಡಿದರೆ ಅದರ ವಸ್ತುವಿನ ಸಂಕೀರ್ಣತೆಗೆ ಅನ್ಯಾಯ ಮಾಡಿದಂತೆ. ಬದಲಾಗಿ, ಎಲ್ಲ ಪ್ರಾಣಿಗಳಲ್ಲಿರುವ ಆಕ್ರಮಣಶೀಲವಾದ ಕ್ರೂರ ಕ್ರಿಯಾಶೀಲತೆ ಮತ್ತು ಎಲ್ಲ ಸಸ್ಯಗಳಲ್ಲಿ ಕಂಡೂ ಕಾಣದಂತಿರುವ ಸೃಜನಶೀಲವಾದ ನಿಷ್ಕ್ರಿಯತೆಗಳ ನಡುವಿನ ಸಂಘರ್ಷವಾಗಿ ಇದನ್ನು ನೋಡಬೇಕು. ಕಾದಂಬರಿಯ ನಾಯಕಿಯ ಆಯ್ಕೆ ಎರಡನೆಯದು. ಇನ್ನೊಂದು ನೆಲೆಯಲ್ಲಿ ಕಾದಂಬರಿಯು, ಸಸ್ಯಲೋಕವು ಜೀವವನ್ನು ಒಳಗಿಟ್ಟುಕೊಂಡು ಪೊರೆಯುವ, ಫಲಿಸುವ ಮತ್ತು ತನ್ನನ್ನು ನಾಶಮಾಡುವವರಿಗೂ ಅನ್ನ ಕೊಡುವ 'ಹೆಣ್ಣುತತ್ವ'ಕ್ಕೆ ಸಂಕೇತವಾಗಿಯೂ ರೂಪಿತವಾಗಿದೆ. ಇಷ್ಟಕ್ಕೂ 'ಗಂಡಸರೆಲ್ಲ ಹೀಗೆ, ಹೆಂಗಸರೆಲ್ಲ ಹಾಗೆ' ಎಂಬ ರೂಕ್ಷ ಸ್ತ್ರೀವಾದ